**ದಿನಾಂಕಃ 26-06-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಎಸ್.ಆರ್.ವಿ. ವಕೀಲರಿಂದಃ**

ಸಾಕ್ಷಿ ನಿಪಿ. 3 ಅನ್ನು ನೋಡಿ ಗುರುತಿಸಿರುತ್ತಾರೆ. ನಿಪಿ. 3 ಅನ್ನು ಅಬ್ದುಲ್ ಜಲೀಲ್ ಸಾಬ್ ರವರು ಅಬ್ದುಲ್ ಕಾದರ್ ರವರಿಗೆ ಬರೆದುಕೊಟ್ಟಿರುತ್ತಾರೆ. ನಿಪಿ. 3 ರಲ್ಲಿ ಇರುವ ಸದರಿ ಅಬ್ದುಲ್ ಜಲೀಲ್ ಸಾಬ್ ರವರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ. 3(ಎ) ಎಂದು ಗುರುತಿಸಲಾಗಿರುತ್ತದೆ. ನಿಪಿ. 3 ಕ್ಕೆ ನಾನು ಸಹಾ ನನ್ನ ಹೆಬ್ಬೆರಳಿನ ಗುರುತನ್ನು ಹಾಕಿರುತ್ತೇನೆ ಅದನ್ನು ಈಗಾಗಲೇ ನಿಪಿ. 3(ಬಿ) ಎಂದು ಗುರುತಿಸಲಾಗಿರುತ್ತದೆ. ನಿಪಿ. 3 ಕ್ಕೆ ಸಾಕ್ಷಿದಾರರಾಗಿ ರಿಯಾಜ್ ರವರು ಸಹಾ ಸಹಿ ಹಾಕಿರುತ್ತಾರೆ. ಸಾಕ್ಷಿ ಸದರಿ ರಿಯಾಜ್ ರವರ ಸಹಿ ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ. 3(ಸಿ) ಎಂದು ಗುರುತಿಸಲಾಗಿರುತ್ತದೆ. ನಿಪಿ. 3 ಅನ್ನು ರಾಮಾಂಜಿನಪ್ಪ ರವರ ಬರೆದಿರುತ್ತಾರೆ. ನಿಪಿ. 3 ಕ್ಕೆ ಸದರಿ ರಾಮಾಂಜಿನಪ್ಪ ರವರ ಆಂಗ್ಲ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿ ರಾಮಾಂಜಿನಪ್ಪ ರವರ ಸಹಿ ನೋಡಿ ಗುರುತಿಸಿರುತ್ತಾರೆ ಅದನ್ನು ಈಗಾಗಲೇ ನಿಪಿ. 3(ಡಿ) ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಿ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**